# ಹಾಡು ನನ್ನ ಲೈಫ್‌ಸ್ಟೈಲ್



**‘ಅದಿತಿ’ ಎಂಬ ಹೆಸರಿಗೆ ಅನಂತ, ಅಲಂಘ್ಯ ಎಂಬ ಅರ್ಥವಿದೆ. ಅದಿತಿ ಸಾಗರ್ ಅವರ ಪ್ರತಿಭೆಯೂ ಹೆಸರಿಗೆ ಅನ್ವರ್ಥವಾಗುವ ರೀತಿ ಹಲವು ಕವಲುಗಳಲ್ಲಿ ಹರಡಿಕೊಂಡಿದೆ.**

**■ ಪದ್ಮನಾಭ ಭಟ್**

ತನ್ನ ಮುಕ್ತಗುಣದಿಂದಲೇ ಮನಸ್ಸಿನ ಗಂಟುಗಳನ್ನು ಸಡಿಲಗೊಳಿಸಿ ಬಿಡುಗಡೆಯ ಭಾವ ಹುಟ್ಟಿಸಬಲ್ಲ ಧ್ವನಿಶಕ್ತಿಯ ಯುವ ಗಾಯಕಿ ಅದಿತಿ ಸಾಗರ್. ರಂಗಭೂಮಿಯ ಸತ್ವವನ್ನುಂಡು ಸಿನಿಮಾರಂಗದಲ್ಲಿಯೂ ಬೆಳೆಯುತ್ತಿರುವ ಈ ಹುಡುಗಿಗೆ ಈಗ ಹದಿನೆಂಟರ ಹರೆಯ. ಅಂದಹಾಗೆ, ಇವರು ಖ್ಯಾತ ನಟ, ನಿರ್ದೇಶಕ, ಕಲಾ ನಿರ್ದೇಶಕ ಅರುಣ್ ಸಾಗರ್ ಮಗಳು.

ಇತ್ತೀಚೆಗೆ ಬಿಡುಗಡೆಯಾದ ಪನ್ನಗಭರಣ ನಿರ್ದೇಶನದ ‘ಫ್ರೆಂಚ್ ಬಿರಿಯಾನಿ’ ಸಿನಿಮಾದ ‘ಸಾವಧಾನ ಬೆಂದಕಾಳೂರು’ ಹಾಡು ಸಾಕಷ್ಟು ಸದ್ದು ಮಾಡಿತ್ತು. ಬೆಂಗಳೂರಿನ ಹಲವು ಚಹರೆಗಳನ್ನು ವ್ಯಂಗ್ಯದ ಧಾಟಿಯಲ್ಲಿ ಕಟ್ಟಿಕೊಡುವ ಆ ರ‍್ಯಾಪ್ ಹಾಡಿನ ಶಾರೀರ ಮತ್ತು ಶರೀರ ಎರಡೂ ಆಗಿದ್ದವರು ಈ ಅದಿತಿ.

ಅದಿತಿಗೆ ಹಾಡು ಅನ್ನುವುದು ಪಟ್ಟುಹಿಡಿದು ಕಲಿತು ಬಂದಿದ್ದಲ್ಲ. ತೊದಲು ನುಡಿಯಿಂದ ಮುಂದಾಗಿ ಮಗು ಮಾತು ಕಲಿಯುತ್ತದಲ್ಲ, ಅಷ್ಟೇ ಸಹಜವಾಗಿ ಅವರಿಗೆ ಹಾಡು ಒಲಿದಿದ್ದು. ಹೀಗಾಗಿಯೇ ಅವರು ‘ಸಂಗೀತ ನನಗೆ ಹಾಬಿ, ಪ್ರೊಫೆಷನ್ ಯಾವುದೂ ಅಲ್ಲ. ಅದು ನನ್ನ ಲೈಫ್; ಲೈಫ್ ಸ್ಟೈಲ್ ಕೂಡ ಹೌದು’ ಎನ್ನುತ್ತಾರೆ. ಇದು ಸಂಗೀತಕ್ಕಷ್ಟೇ ಅಲ್ಲ, ಅವರ ಆಸಕ್ತಿಯ ಇತರ ಕವಲುಗಳಾದ, ನಟನೆ, ಫೋಟೊಗ್ರಫಿ, ಚಿತ್ರಕಲೆಗಳಿಗೂ ಅನ್ವಯಿಸುತ್ತದೆ. ‘ನನಗೆ ಯಾವುದನ್ನೂ ಯಾರೂ ಇಂಟ್ರಡ್ಯೂಸ್ ಮಾಡಿಕೊಡಲಿಲ್ಲ. ನಾನು ಬೆಳೆದ ಪರಿಸರದಲ್ಲಿ ಅದು ಇತ್ತು. ಹಾಗಾಗಿ ನನ್ನೊಳಗೆ ಮೈಗೂಡಿತು’ ಎನ್ನುವುದು ಅವರ ವಿವರಣೆ.

ಬಾಲ್ಯದಲ್ಲಿ ಎಲ್ಲರೂ ಕಾಗಕ್ಕ ಗುಬ್ಬಕ್ಕ ಕತೆ ಕೇಳಿಕೊಂಡು ಬೆಳೆದರೆ ಈ ಹುಡುಗಿ ತಂದೆಯ ಬಾಯಿಯಿಂದ ನಾಟಕದ ಕತೆಗಳನ್ನು, ಹಾಡುಗಳನ್ನು ಕೇಳಿಕೊಂಡು ಬೆಳೆದವಳು. ಹಾಗಾಗಿಯೇ ತಿಂದ ಅನ್ನದೊಟ್ಟಿಗೆ ರಂಗಭೂಮಿಯ ಗಂಧವೂ ರಕ್ತಗತವೇ ಆಯಿತು. ಕಾರಂತರ ನಾಟಕದ ಹಾಡುಗಳು ಅವರೊಳಗೆ ಪದೇ ಪದೇ ರಿಂಗಣಿಸಿವೆ.

‘ಹಾಡು ನನ್ನ ಬದುಕಿನ ಭಾಗ. ಈಗ ಸಿನಿಮಾ ಹಾಡುಗಳನ್ನು ಹಾಡುತ್ತಿದ್ದೇನೆ. ಒಂದು ವೇದಿಕೆ ಸಿಕ್ಕಿದೆ, ಎಲ್ಲವೂ ಸರಿ. ಆದರೆ ಈ ವೇದಿಕೆಯಲ್ಲಿ ಹಾಡುವ ಅವಕಾಶ ಸಿಗದೇ ಇದ್ದಿದ್ದರೂ ನಾನು ಹಾಡುತ್ತಿದ್ದೆ. ಹಾಡುತ್ತಲೇ ಇರುತ್ತಿದ್ದೆ. ಯಾಕೆಂದರೆ ಅದು ನನಗೆ ಖುಷಿ ಕೊಡುವ ಕಲೆ. ನಾನು ನನ್ನ ಹಾಡಿನ ಜೊತೆಗೆ ಇರಲು ಯಾವ ವೇದಿಕೆಯೂ ಬೇಕಾಗಿಲ್ಲ’ ಎಂದು ತಮ್ಮ ಬಿಚ್ಚುಧ್ವನಿಯಲ್ಲಿಯೇ ಹೇಳುತ್ತಾರೆ ಅದಿತಿ.

ಈಗಷ್ಟೇ ಸಿನಿಮಾಸಂಗೀತ ಕ್ಷೇತ್ರದಲ್ಲಿ ಹೆಜ್ಜೆಯಿಡುತ್ತಿರುವ ಅವರು, ಈಗಾಗಲೇ ಸುಮಾರು ಹನ್ನೊಂದು ಹಾಡುಗಳನ್ನು ಹಾಡಿದ್ದಾರೆ. ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಬಿಡುಗಡೆಯಾಗಿವೆ. ‘ಕವಲು ದಾರಿ’ ಸಿನಿಮಾದ ‘ಸಂಶಯಾ...’ ಮತ್ತು ‘ಫ್ರೆಂಚ್ ಬಿರಿಯಾನಿ’ ಸಿನಿಮಾದ ‘ಸಾವಧಾನ ಬೆಂದಕಾಳೂರು’ ಹಾಡುಗಳು ಅವರ ಗಾಯನದ ಭಿನ್ನ ಸಾಧ್ಯತೆಗಳ ಬಗ್ಗೆ ಅವರಿಗೇ ತಿಳಿಸಿಕೊಟ್ಟಿವೆಯಂತೆ. ಇದಕ್ಕಾಗಿ ಅವರು ಸಂಗೀತ ನಿರ್ದೇಶಕರಾದ ಚರಣ್ ರಾಜ್ ಮತ್ತು ವಾಸುಕಿ ವೈಭವ್ ಅವರಿಗೆ ಕೃತಜ್ಞತೆ ಹೇಳುತ್ತಾರೆ.

ಒಂದು ಹಾಡಿಗೆ ಧ್ವನಿಯಾಗುವ ಮುನ್ನ ಅವರು ಆ ಹಾಡಿನ ಸನ್ನಿವೇಶವನ್ನು ಅರಿತುಕೊಳ್ಳಲು ಯತ್ನಿಸುತ್ತಾರಂತೆ. ಅದೇ ಅವರ ಸಿದ್ಧತೆ.

‘ನಾನು ರಂಗಭೂಮಿಯಲ್ಲಿ ನಟಿಸಿರುವುದರಿಂದ, ರಂಗಸಂಗೀತದ ಪರಿಚಯ ಇರುವುದರಿಂದ ಯಾವುದೇ ಒಂದು ಹಾಡನ್ನು ಆ ಸನ್ನಿವೇಶದ ಜೊತೆಗೇ ಗ್ರಹಿಸಿಕೊಳ್ಳುತ್ತೇನೆ. ಹಾಗೆ ಮಾಡಿದಾಗ ಅದಕ್ಕೆ ಅಗತ್ಯವಿರುವ ಭಾವನೆಗಳನ್ನು ಸ್ಫುರಿಸಲು ಸಾಧ್ಯವಾಗುತ್ತದೆ. ಹಾಡಿನ ಟ್ಯೂನ್ ಮತ್ತೆ ಸಾಹಿತ್ಯ